<u>ಸಾಕ್ಷಿಯನ್ನು ದಿನಾಂಕ 09.07.2025 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ ಟಿ ಎನ್ ಎಸ್ ವಕೀಲರಿಂದಃ</u>

ಓ ಎಸ್ 116/2020 ಆದೇಶ ಪುಟವನ್ನು ಕೊಟ್ಟಿದ್ದು ಯಾವ ಉದ್ದೇಶಕ್ಕಾಗಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ನನ್ನ ಮಕ್ಕಳು ಸಂಪಾದಿಸುತ್ತಾರೆ ಅದನ್ನು ತೋರಿಸಲು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ದಿಃ 25.10.2021 ರಲ್ಲಿ ಮೊದಲನೆ ಮಗ ಕೆಲಸಕ್ಕೆ ಸೇರಿದ್ದಾನೆ ಎಂದರೆ ಸರಿ. ಅವನಿಗೆ 2 ಜನ ಮಕ್ಕಳು ಇದ್ದಾರೆ. ನನ್ನ 2 ನೇ ಮಗನಿಗೆ 2 ಮಕ್ಕಳು ಇದ್ದಾರೆ. ರಾಜೇಂದ್ರ ಪ್ರಸಾದ ಬೆಂಗಳೂರಿನಲ್ಲಿದ್ದು, 2 ನೇ ಮಗ ಕೋಲಾರದಲ್ಲಿ ಕೆಲಸ ಮಾಡುತ್ತಿದ್ದು ಚಿಂತಾಮಣಿಯಲ್ಲಿ ವಾಸ ಮಾಡುತ್ತಾರೆ. ರಾಜೇಂದ್ರ ಪ್ರಸಾದ ಬೆಂಗಳೂರಿನಲ್ಲಿದ್ದು ಆತ ಅತ್ತೆ ಮನೆಯಲ್ಲಿದ್ದಾನೆ. ರಾಜೇಂದ್ರ ಪ್ರಸಾದ ಅಕೌಂಟ ಯಾವ ಬ್ಯಾಂಕನಲ್ಲಿದೆ ಎಂದು ನನಗೆ ಗೊತ್ತಿಲ್ಲ ಆದರೆ ಬಂದು ಅವರ ತಾಯಿಗೆ ಸಂಬಳವನ್ನು ಕೊಡುತ್ತಾರೆ. ಸಂಬಳದ ಹಣ ನೇರವಾಗಿ ಖಾತೆಗೆ ಜಮೆಯಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅವರ ಪಾಸಬುಕನ್ನು ನ್ಯಾಯಾಲಯಕ್ಕೆ ಕೊಡಲು ಏನು ತೊಂದರೆ ಎಂದರೆ ನನ್ನ ಮಗ ಅದನ್ನೆಲ್ಲಾ ಹೇಳುವುದಿಲ್ಲಾ. ನನ್ನ ಮಗನ ಖಾತೆಯಲ್ಲಿ ಎಷ್ಟು ಹಣ ಇದೆ ಎಂದು ನನ್ನ ಮಗ ತಿಳಿಸುವುದಿಲ್ಲ. ಆತನನ್ನು ಯಾವ ಬ್ಯಾಂಕನಲ್ಲಿ ಖಾತೆ ಇದೆ ಹಾಗೂ ಎಷ್ಟು ಹಣ ಇದೆ ಮತ್ತೆ ಎಷ್ಟು ಹಣ ಡ್ರಾ ಮಾಡಿದ್ದಾನೆ ಎಂದು ಯಾವಾಗಲಾದರೂ ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ನಾನು ಕೇಳಿಲ್ಲ ಅವರು ಹೇಳಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನಮ್ಮ ಮಕ್ಕಳಿಗೆ ಸಂಬಳದ ಹಣ ಅವರಿಗೆ ಸಾಕಾಗುವುದಿಲ್ಲ ನಾವೇ ಅವರಿಗೆ ಕೊಡಬೇಕೆಂದರೆ ಸರಿಯಲ್ಲ. ನಿಪಿ 30 ದಾಖಲಾತಿಯನ್ನು ಯಾರು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನನಗೆ ಓದಲು ಬರೆಯಲು ಬರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವ ದಾಖಲಾತಿಗಳನ್ನು ನನ್ನ ಮಕ್ಕಳು ವಕೀಲರಿಗೆ ಕೊಟ್ಟಿದ್ದು ಅದನ್ನು ಹಾಜರು ಮಾಡಿದ್ದೇನೆ. ಏನೆಲ್ಲಾ ದಾಖಲಾತಿಗಳನ್ನು ಕೊಟ್ಟಿದ್ದಾರೋ ಅವನು ತಿಳಿಸಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನಾವು 8 ಲಕ್ಷ ಕೊಟ್ಟಿರುವ ಬಗ್ಗೆ ಹಾಗೂ ಸರ್ವೆ ದಾಖಲಾತಿಗಳನ್ನು ಕೊಟ್ಟಿದ್ದೇವೆ ಎಂದು

ನುಡಿಯುತ್ತಾರೆ. ನಿಪಿ 22 ರಿಂದ 44 ರಲ್ಲಿನ ದಾಖಲಾತಿಗಳನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ನಮ್ಮ ಮಕ್ಕಳು ಕೊಟ್ಟಿದ್ದು ಅವರ ಸ್ಯಾಲರಿ ಸರ್ಟಿಫಿಕೇಟ ಇದ್ದು ಅವನ್ನೆಲಾ ವಕೀಲರಿಗೆ ಕೊಟ್ಟಿದ್ದೇವೆ. ನಮ್ಮ ಮಕ್ಕಳಿಗೆ ಎಷ್ಟು ಸಂಬಳ ಬರುತ್ತದೆ ಎಂದು ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನಾನು ಅದನ್ನೆಲ್ಲಾ ಕೇಳುವುದಿಲ್ಲಾ ಎಂದು ನುಡಿಯುತ್ತಾರೆ. ನಿಪಿ 41 ದಾಖಲಾತಿಯನ್ನು ಸರ್ವೆ ಇಲಾಖೆಯಿಂದ ಪಡೆದುಕೊಂಡಿದ್ದೇನೆ. 2 ಗುಂಟೆ ಅಳತೆ ಮಾಡಿದ ಬಗ್ಗೆ ದಾಖಲಾತಿಯಾಗಿದ್ದು, ಚಿಂತಾಮಣಿ ಸರ್ವೆ ಇಲಾಖೆಯಿಂದ ಪಡೆದುಕೊಂಡಿದ್ದೇನೆ. ನಿಪಿ 43 ದಾಖಲಾತಿಯನ್ನು ಯಾವ ತಾರೀಖಿನಲ್ಲಿ ಮಾಡಿದ್ದೀರಾ ಎಂದು ನನಗೆ ಗೊತ್ತಿಲ್ಲ. ಅದನ್ನು ಯಾರು ಬರೆದಿದ್ದಾರೆ ಎಂದರೆ ಅದನ್ನು ಸರ್ವೆಯವರು ಬರೆದಿದ್ದಾರೆ. ಶ್ರೀನಿವಾಸ ರವರು ಸರ್ವೆಯವರ ಮುಂದೆ ಹೇಳಿಕೆ ಕೊಟ್ಟಿದ್ದರು. ನಮ್ಮ ಸಾಕ್ಷಿ ವಿಚಾರ ಮುಗಿದ ನಂತರ ನಿಪಿ 43 ದಾಖಲಾತಿಗಳನ್ನು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಅದರಲ್ಲಿರುವ ಶ್ರೀನಿವಾಸ ರವರ ಸಹಿ ಪ್ರತಿವಾದಿಯದ ಅಲ್ಲ ಎಂದರೆ ಸರಿಯಲ್ಲ. ಅದು ಸೃಷ್ಠಿ ಮಾಡಿದ ಸುಳ್ಳು ಸಹಿ ಎಂದರೆ ಸರಿಯಲ್ಲ. ಬಡವರ ಆಸ್ತಿಯನ್ನು ಹೊಡೆಯಲು ಸುಳ್ಳು ದಾಖಲಾತಿಯನ್ನು ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.